ವಿದ್ಯುತ್ ಉತ್ಪಾದನೆ ಕುರಿತು

152 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಮೇರಿಕದ ಕೊಜೆಂಟ್ರಿಕ್ಸ್ ಸಂಸ್ಥೆಗೆ ಶಾಖೋತ್ಪನ್ನ ಉತ್ಪಾದನೆಗೆ ಮಂಗಳೂರಿನಲ್ಲಿ ಭೂಮಿಯನ್ನು ಕೊಟ್ಟಿದೆಯೇ?

ಆ) ಇದು ಕಾರ್ಯಾರಂಭವನ್ನು ಯಾವಾಗ ಮಾಡಲಿದೆ ಇದರ ಅಂದಾಜು ಯೋಜನಾ ವೆಚ್ಚವೆಷ್ಟು?

ಇ) ವಿದ್ಯುತ್ ಚಿತಾಗಾರಗಳಿಗೆ ಈಗ ವಿದ್ಯುತ್ ದರವನ್ನು ವಿಧಿಸುತ್ತಿರುವುದರಲ್ಲಿ ಕಡಿಮೆ ಮಾಡುವ ಬಗ್ಗೆ ಸರ್ಕಾರವೇನಾದರೂ ಯೋಚಿಸಿರುವರೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಕೋಜೆಂಟ್ರಿಕ್ಸ್ ಸಂಸ್ಥೆಯು ಜನವರಿ 2000ನೇ ಇಸವಿಯಲ್ಲಿ – ಯೋಜನೆ ಅಂತಿಮ ಹಂತವನ್ನು ತಲುಪುವ ನಿರೀಕ್ಷೆ ಇದೆ. ಈ ಯೋಜನೆಯ ಒಟ್ಟು ವೆಚ್ಚವು ರೂ. 4298.78 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

ಇ) ಇಲ್ಲ

ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವುದು

161ಎ - ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಪೂರೈಕೆಗಾಗಿ ಖಾಸಗಿ ಉದ್ದಿಮೆಗಳು ಬಳಸುವ ಸಣ್ಣ ಜನರೇಟರ್‌ಗಳಿಗೆ ತೆರಿಗೆ ವಿಧಿಸುವುದನ್ನು ರದ್ದು ಪಡಿಸುವ ವಿಷಯ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹೆಚ್.ಪಿ. ವರೆಗಿನ ಜನರೇಟರ್‌ಗಳಿಗೆ ಇದು ಅನ್ವಯವಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಈಗಾಗಲೇ ಅಗತ್ಯವಾದ ಸರ್ಕಾರಿ ಆದೇಶ ಹೊರಡಿಸಿದೆ.

ಆ) ಉದ್ದಿಮೆದಾರರು ಅಳವಡಿಸಿಕೊಂಡಿರುವ ಎಲ್ಲಾ ಹೆಚ್.ಪಿ.ಗೂ ಇದು ಅನ್ವಯವಾಗುವುದು.

ಕೆ.ಇ.ಬಿ.ಗೆ ಬರಬೇಕಾದ ಬಾಕಿ ಹಣ

161 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಹಣವೆಷ್ಟು, ಯಾವ ಯಾವ ಕಂಪನಿಗಳಿಂದ ಎಷ್ಟೆಷ್ಟು ಹಣ ಬರಬೇಕಾಗಿದೆ, ಬಾಕಿ ವಸೂಲಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ದಿನಾಂಕ : 30-11-95ರ ಅಂತ್ಯಕ್ಕೆ ವಿವಿಧ ಗ್ರಾಹಕರುಗಳಿಂದ ಮಂಡಳಿಗೆ ಬರಬೇಕಾಗಿದ್ದ ಬಾಕಿ ಹಣದ ಒಟ್ಟು ಮೊತ್ತ ರೂ. 71,364.68 ಲಕ್ಷಗಳು, ದಿನಾಂಕ 30-11-95ರ ಅಂತ್ಯದಲ್ಲಿರುವಂತೆ ರೂ. ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಬಾಕಿ ಉಳಿಸಿ ಕೊಡುವ ಖಾಸಗಿ ಗ್ರಾಹಕರುಗಳ ಹೆಸರು ಮತ್ತು ಬಾಕಿ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.